ಕರ್ನಾಟಕ ಸರ್ಕಾರ

**ನೋಂದಾಯಿತ ಅಂಚೆ, ಸ್ವೀಕೃತಿ ಬಾಕಿ**

ಸಂಖ್ಯೆ: ಅಪಜೀ 101 ಎಫ್‌ಎಲ್‌ಎಲ್ 2016

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 11-10-2019

**ತುರ್ತು**
**ನೆನಪೋಲೆ- 03**

**ಇವರಿಂದ:**

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

**ಇವರಿಗೆ:**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು),**
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

**ಮಾನ್ಯರೆ,**

**ವಿಷಯ:** ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕು, ಭೂತರಾಮನಹಟ್ಟಿ ಗ್ರಾಮದ ಸ.ನಂ. 1/1ರಲ್ಲಿನ ಅರಣ್ಯ ಜಮೀನಿನ ಪೈಕಿ 72.177 ಹೆಕ್ಟೇರ್ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ಸಮ ಸಂಖ್ಯೆಯ ಸರ್ಕಾರಿ ಪತ್ರಗಳು, ದಿನಾಂಕ: 14-01-2019, 15-02-2019 ಮತ್ತು 21-08-2019.
2. ತಮ್ಮ ಕಚೇರಿಯ ಪತ್ರಗಳು ಸಂಖ್ಯೆ: A5(2).GFL.CR-208/1988-89, ದಿನಾಂಕ: 15-06-2019 ಮತ್ತು 15-09-2019.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳತ್ತ ಗಮನ ಸೆಳೆಯಲಾಗಿದೆ. ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕು, ಭೂತರಾಮನಹಟ್ಟಿ ಗ್ರಾಮದ ಸ.ನಂ. 1/1ರಲ್ಲಿನ ಅರಣ್ಯ ಜಮೀನಿನ ಪೈಕಿ 72.177 ಹೆಕ್ಟೇರ್ ಜಮೀನನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡುವ ವಿಷಯವಾಗಿ ಉಲ್ಲೇಖಿತ (1)ರ ದಿನಾಂಕ: 21-08-2019ರ ಪತ್ರದಲ್ಲಿ, "ಅರಣ್ಯ ಭೂಮಿಯನ್ನು ಉಪಯೋಗಿಸಿಕೊಂಡಿರುವ ಬಗ್ಗೆ ಕ್ರಮ ಜರುಗಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಲು ಅನುವಾಗುವಂತೆ ಸೂಕ್ತ ಕ್ರಮವಹಿಸುವಂತೆ ತಿಳಿಸಲಾಗಿದ್ದರೂ" ಸಹ ಉಲ್ಲೇಖಿತ (2)ರ ದಿನಾಂಕ: 15-09-2019ರ ಪತ್ರದಲ್ಲಿ ದಿನಾಂಕ: 15-06-2019ರ ಮಾಹಿತಿಯನ್ನೇ ಪುನರುಚ್ಚರಿಸಲಾಗಿದ್ದು, ಈ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು ಸೂಕ್ತವಾಗುವುದಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಪ್ರಕರಣದಲ್ಲಿ, **"ಈಗಾಗಲೇ ಶಿಕ್ಷಣ ಇಲಾಖೆಯ ವ್ಯಾಪ್ತಿಯ ವಿಶ್ವವಿದ್ಯಾಲಯವು ಪ್ರಾರಂಭಗೊಂಡಿದ್ದು, ಈ ಹಂತದಲ್ಲಿ ಅರಣ್ಯ ಭೂಮಿಯನ್ನು ಮಂಜೂರಾತಿ ಪಡೆಯದೆ ಉಪಯೋಗಿಸಿಕೊಂಡಿರುವ ಬಗ್ಗೆ ಕ್ರಮ ಜರುಗಿಸಲು ಸಾಧ್ಯವಾಗುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಹೊರಡಿಸಬಹುದಾದ ಅ.ಸ.ಪತ್ರದ ಕರಡನ್ನು ಜರೂರಾಗಿ ಸಿದ್ದಪಡಿಸಿ ಸಲ್ಲಿಸುವಂತೆ"** ಮತ್ತೊಮ್ಮೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

ಅರ್ಚನ ಎಂ.ಎಸ್. 11/10/2019

**(ಅರ್ಚನ ಎಂ.ಎಸ್.)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಅರಣ್ಯ-ಸಿ)

15/10/2019

11/10/19